ಎಕ್ಸಿಕ್ಯೂಷನ್ ಃ 05-2012 ಓಡಬ್ಲುಃ 2

ಸಾಕ್ಷಿಯನ್ನು ದಿನಾಂಕಃ 07-11-2015 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಶ್ರೀ ಆರ್ ಎಫ್ ಎಸ್ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳೆಲ್ಲವೂ ಸತ್ಯವಾಗಿವೆ. ಅದರಲ್ಲಿ ಬರೆದ ವಿಷಯವನ್ನು ಓದಿ ತಿಳಿದು ಸಹಿ ಮಾಡಿದ್ದೇನೆ.

ಪಾಟೀ ಸವಾಲು ಃ ಶ್ರೀ ಎನ್ ವಿ ಹೆಚ್ ವಕೀಲರಿಂದ

ರವೀಂದ್ರ ಹಾಗೂ ರಾಮದುರ್ಗದವರ ನಡುವೆ ವ್ಯಾಜ್ಯ ನಡೆದಿದೆ. ಪ್ರಮಾಣ ಪತ್ರದಲ್ಲಿ ಬರೆದ ವಿಷಯ ಗೊತ್ತು. ರಿ ಸ ನಂ 12 ಮತ್ತು 16 ರ ಉತಾರ ನೋಡಿದ್ದೇನೆ. ಈ ಉತಾರಗಳು ಬಾಷಲ್‌ಮಿಷನ್ ಹೆಸರಲ್ಲಿದೆ. ನನ್ನ ಸರ್ವೆ ನಂ 220 ಸಿದ್ದನಭಾವಿಯಲ್ಲಿದೆ. ನನ್ನ ಹೊಲ ದಾಟಿ ರವೀಂದ್ರ ರವರ ಹೊಲ ಬರುತ್ತದೆ. ನನ್ನ ಹೊಲದ ಉತಾರ ಹಾಜರುಪಡಿಸಿಲ್ಲ.

ದಾವಾ ಆಸ್ತಿ ಮೊದಲಿನಿಂದ ದಾವೇದಪ್ಪ ಇವರ ಕಬ್ಜೆಯಲ್ಲಿದೆ ಅಂದರೆ ಸರಿಯಲ್ಲ. ನಾನು ಹಾಗೂ ರವೀಂದ್ರ ಸ್ನೇಹಿತರು ಅಂದರೆ ಸರಿಯಲ್ಲ. ರವೀಂದ್ರ ದಾವಾ ಆಸ್ತಿ ಸಾಗುವಳಿ ಮಾಡುತ್ತಿರಲಿಲ್ಲ ಅಂದರೆ ಸರಿಯಲ್ಲ. ಬಾಷಲ್ ಮಿಷನ್ ಹಾಗೂ ರವೀಂದ್ರ ರವರ ಮದ್ಯೆ ಇರುವ ವಿವಾದ ಗೊತ್ತಿಲ್ಲ. ಆದರೆ ದಾವಾ ಜಮೀನು ಬಾಷಲ್ ಮಿಷನ್‌ಗೆ ಸೇರಿದೆಂದು ತಿಳಿದಿರುತ್ತದೆ. ರವೀಂದ್ರ ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.